‘ಯಾರು ನೀನು, ನನಗೂ ನಿನಗೂ ಯಾವುದೇ ಸಂಬಂಧವಿಲ್ಲ. ನಾನು ಅವತ್ತೇ ನಿನಗೆ ಹೇಳಿಲ್ವ?’

‘ಬಾ ರಾಧಾ, ಇವತ್ತೊಂದು.....ದಿನ. ಮತ್ತೆ ನಾನು..... ಈ ಕಡೆ ಬರೋಲ್ಲ’

‘ಹೆಚ್ಚಿ ಮಾತ್ ಬೇಡ. ಮೊದ್ಲು ನಡೀ ಆಚೆಗೆ’ ಎಂದು ಅವನನ್ನು ಹಿಡಿದು ಹೊರದಬ್ಬಲು ನೋಡಿದಳು. ಆದರವನು ಬಾಗಿಲಿಗೆ ಚಿಲಕ ಹಾಕಿ ಅವಳನ್ನು ಸಮೀಪಿಸತೊಡಗಿದ. ರಾಧಾ ತನ್ನೆಲ್ಲಾ ಶಕ್ತಿ ಪ್ರಯೋಗಿಸಿ ಆತನನ್ನು ದೂರ ತಳ್ಳಲು ಪಟ್ಟಪ್ರಯತ್ನ ಬಳ್ಳಿಯೊಂದು ಮರದ ಬುಡವನ್ನೇ ನೂಕಲು ಹೋದಂತೆ ವಿಫಲವಾಯಿತು.

ಅವಳನ್ನು ಬರಸೆಳೆದು ಬಾಚಿ ತಬ್ಬಿಕೊಂಡವನು ನೆಲಕ್ಕೆ ಅನಾಮತ್ತಾಗಿ ಕೆಡವಿಕೊಂಡ. ಅವನ ಮೃಗ ಕಾಮಕ್ಕೆ ಅವಳು ಅಸಹಾಯಕಳಾಗಿ ಸೋತು ಶರಣಾದಳು. ನಂತರ ಮೇಲೆದ್ದು ತನ್ನ ಜೀವನದ ಸಂಕಲ್ಪಕ್ಕೆ ಭಂಗ ತಂದನೆಂದು ಕೋಪದಿಂದ ಮೂಲೆಯಲಿದ್ದ ಚಪ್ಪಲಿ ಕೈಗೆತ್ತಿಕೊಂಡು ಷರಟು ಹಾಕಿಕೊಳ್ಳುತ್ತಿದ್ದ ಅವನ ಮುಖಕ್ಕೆ ರಪರಪನೆ ಬಾರಿಸಿದಳು.

‘ನಿಯತ್ತಿಲ್ಲದ ನಾಯಿ ನೀನು. ನಾನು ಅವತ್ತೆ ನಿನಗೆ ಹೇಳಿಲ್ಲವೇನೋ, ಪುನಃ ನನ್ನ ತಂಟೆಗೆ ಬಾರದಂತೆ. ಇವತ್ತೇಕೆ ಬಂದೆ. ನನ್ನ ಮನಸ್ಸು ನನ್ನ ಶೀಲನ ಹಾಳು ಮಾಡಿ ಬಿಟ್ಟೆಯಲ್ಲೋ’ ಎಂದು ಕೂಗಾಡಿದಳು. ನನ್ನ ಶೀಲ ಹಾಳು ಮಾಡಿದೆಯಲ್ಲೋ ಎಂಬ ರಾಧಾಳ ಮಾತು ಕೃಷ್ಣಯ್ಯಂಗಾರಿಗೆ ಆಶ್ಚರ್ಯ ವಿಚಿತ್ರ ಎನಿಸಿ ವ್ಯಂಗ್ಯವಾಗಿ ನಕ್ಕ.

‘ನಾನು ನಿನ್ನ ಶೀಲ ಹಾಳು ಮಾಡಿದ್ನಾ? ನನ್ನಿಂದ ಮಗು ಪಡಿಬೇಕಾದ್ರ ನಿನ್ನ ಶೀಲ ಹಾಳಾಗಿರ್ಲಿಲ್ವ?’

‘ಏಯ್, ಆಗ ನಾನು ಒಂದು ಉದ್ದೇಶಕ್ಕಾಗಿ ನನ್ನೀ ದೇಹನ ನಿನಗೆ ಅರ್ಪಿಸಿಕೊಂಡಿದ್ದೆ. ಈಗ ನೀನು ನನ್ನ ಇಚ್ಛೆಗೆ ವಿರುದ್ಧವಾಗಿ ನನ್ನ ಅನುಭವಿಸಿರೋದು ಅತ್ಯಾಚಾರಕ್ಕೆ ಸಮ. ಇದೆಲ್ಲ ನಿನ್ನಂಥ ನಂಬಿಕೆ ದ್ರೋಹಿಗೆ ಅರ್ಥವಾಗದ ವಿಷಯ. ಈಗ ನೀನು ಇಲ್ಲಿಂದ ಹೋಗ್ತಿಯೋ ಇಲ್ಲ ಪೊಲೀಸ್‌ಗೆ ಫೋನ್ ಮಾಡ್ಲೋ’

ಅವಳು ಪೊಲೀಸ್ ಎಂದೊಡನೆ ಭಯಗೊಂಡ ಕೃಷ್ಣಯ್ಯಂಗಾರಿ ಮರು ಮಾತನಾಡದೆ ಮನೆಯಿಂದ ಹೊರ ನಡೆದ. ಬಾಗಿಲನ್ನು ದಡಾರನೆ ಹಾಕಿಕೊಂಡ ರಾಧಾ ತಾನು ಧರಿಸಿದ್ದ ನೈಟಿಯನ್ನು ಬಿಚ್ಚೆಸೆದು ಬಚ್ಚಲಿಗಿಳಿದು ಹಂಡೆಯ ನೀರೆಲ್ಲಾ ಖಾಲಿಯಾಗುವವರೆಗೂ ತಲೆಯ ಮೇಲೆ ಸುರಿದುಕೊಂಡಳು.

ಆದರೂ ತನ್ನ ದೇಹ ಮಾತ್ರ ಅಪವಿತ್ರವಾಯ್ತು ಎಂಬ ನೋವು ಮಾತ್ರ ದೂರಾಗಲಿಲ್ಲ. ಅಂತಹ ಪರಿಸ್ಥಿತಿಯಲ್ಲೂ ‘ಕೆಟ್ಟ ಮಿಲನ ಎಂದರೆ ಇದೇನೆ’ ಎಂದುಕೊಂಡಳು. ಮಾರನೆ ದಿನ ರಂಗನಾಥನಿಗೆ ರಾತ್ರಿ ನಡೆದ ವಿಷಯ ಹೇಳಿಕೊಂಡು ಕಣ್ಣೀರು ಹಾಕಿದಳು. ಅವನ ಮೇಲೆ ಪೊಲೀಸರಿಗೆ ದೂರು ನೀಡುತ್ತೇನೆ ಎಂದಳು.

‘ಆದದ್ದು ಆಗಿ ಹೋಯಿತು. ಪುನಃ ನಿನ್ನ ತಂಟೆಗೆ ಬರದಂತೆ ಅವನಿಗೆ ನಾನು ಎಚ್ಚರಿಕೆ ಕೊಡ್ತೀನಿ. ಇದೊಂದು ಕೆಟ್ಟ ಕನಸು ಎಂದು ಮರೆತು ಬಿಡು’ ಎಂದು ರಂಗನಾಥ ಸಮಾಧಾನ ಮಾಡಿದ. ಅವನು ಹೇಳಿದಂತೆ ಅದನ್ನು ಕೆಟ್ಟ ಕನಸೆಂದು ಮರೆತು ಬಿಡುತ್ತಿದ್ದಳೋ ಏನೋ. ಆದರೆ ತನ್ನ ಗರ್ಭದಲ್ಲಿ ಭ್ರೂಣ ಬೆಳೆಯತೊಡಗಿದಂತೆ ಹತಾಶೆ, ಪಾಪ ಪ್ರಜ್ಞೆ ಅವಳನ್ನು ಕಾಡತೊಡಗಿತ್ತು.

ಇದರಿಂದ ಬಿಡುಗಡೆ ಪಡೆಯಲೇಬೇಕು ಎಂದು ಆಸ್ಪತ್ರೆಗೆ ಹೋಗಿ ಅಬಾರ್ಷನ್ ಮಾಡುವಂತೆ ಕೇಳಿಕೊಂಡಾಗ ವೈದ್ಯರು ‘ಕಾನೂನಿನಲ್ಲಿ ಭ್ರೂಣ ಹತ್ಯೆ ಅಪರಾಧ. ನೀವು ತುಂಬಾ ವೀಕ್ ಇದ್ದೀರಿ. ರಕ್ತಹೀನತೆ ಇದೆ. ನೀವು ಬೇರೆ ಕಡೆ ಹೋಗಿ ಅಬಾರ್ಷನ್ ಮಾಡಿಸಿಕೊಂಡರೆ ನಿಮ್ಮ ಜೀವಕ್ಕೆ ಅಪಾಯವಾಗಬಹುದು’ ಎಂದು ಎಚ್ಚರಿಸಿದರು.

‘ರಾಧಾ ನೀನು ಅವನ ಮೇಲಿನ ಸಿಟ್ಟಿಗೆ ಅಬಾರ್ಷನ್ ಮಾಡಿಸಿಕೊಳ್ಳಲು ಹೋಗಿ ನಿನಗೆ ಏನಾದರೂ ಹೆಚ್ಚು ಕಡಿಮೆಯಾದರೆ ಈಗಿರುವ ಮಗುವನ್ನು ನೋಡಿಕೊಳ್ಳುವವರು ಯಾರು? ತನ್ನದಲ್ಲದ ತಪ್ಪಿಗೆ ಮಗುವನ್ನು ಅನಾಥನನ್ನಾಗಿ ಮಾಡ್ಬೇಡ’ ಎಂದ ರಂಗನಾಥ ಹಿತವಚನಕ್ಕೆ ಮನ್ನಣೆಯಿತ್ತು ಮನೆಗೆ ಬಂದಳು.

ಎರಡನೆಯದು ಹೆಣ್ಣು ಮಗುವಾದಾಗ ಅವಳಲ್ಲಿ ಎಂದೂ ಮೂಡದ ಮಧುರ ಭಾವನೆಗಳು ಪುಟಿದೇಳ ತೊಡಗಿದವು. ಅವಳಲ್ಲಿ ಹೆಣ್ತನ ಮುನ್ನೆಲೆಗೆ ಬಂದಿತು.